2		
	ಒಟ್ಟು	9680

ಬಿ ಓ ಟಿ ರಸ್ತೆ ತೊಂದರೆ

211(400) ಶ್ರೀ ಶಿವಲಿಂಗೇಗೌಡ ಕೆಎಂ:(ಅರಸೀಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿಯಿಂದ ಹಾಸನಕ್ಕೆ B.O.T. ಆಧಾರದ ಮೇಲೆ ರಸ್ತೆ ಮಂಜೂರಾತಿ ಆಗಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಆದೇಶ ಸಂಖ್ಯೆ.ಲೋಇ 207 ಇಎಪಿ 2007, ದಿನಾಂಕ 06-12-2008ರಲ್ಲಿ ಕರಡು concession agreementಗೆ ಅನುಮೋದನೆ ನೀಡಲಾಗಿರುತ್ತದೆ.

ಆ) ಸರ್ಕಾರದಿಂದ ಅನುಮೋದನೆ ಪಡೆದು ಮೂರು ಬಾರಿ ಟೆಂಡರ್ ಆಹ್ವಾನಿಸಿದ್ದು, ಯಾವುದೇ ರಿಯಾಯಿತಿದಾರರು ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ. ಆದಾಗ್ಯೂ 4ನೇ ಟೆಂಡರ್‌ನ್ನು ಈಗಾಗಲೇ ಆಹ್ವಾನಿಸಿದ್ದು, ದಿನಾಂಕ 05-07-2010ರಂದು ಆಸಕ್ತಿವುಳ್ಳ ರಿಯಾಯಿತಿದಾರರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವೆಂದು ನಿಗಧಿಪಡಿಸಲಾಗಿರುತ್ತದೆ.

ಕಾಮಗಾರಿಗಳಿಗೆ ಹಣ ಪಾವತಿ

212(401) ಶ್ರೀ ಶಿವಲಿಂಗೇಗೌಡ ಕೆ ಎಂ:(ಅರಸೀಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 12ನೇ ಹಣಕಾಸು ಯೋಜನೆಯಲ್ಲಿ ಬಾಕಿ ಎರುವ ಕಾಮಗಾರಿಗಳ ಬಿಲ್ಲಿನ ಮೊತ್ತ ಎಷ್ಟು?